# ಜಯ ಜಯ ಶಂಕರ



■ ಪದ್ಮನಾಭ ಭಟ್

ಮೂಲ ಉತ್ತರ ಕರ್ನಾಟಕ. ತಂದೆ ಪೊಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿದ್ದವರು. ಅವರ ವೃತ್ತಿಯ ಕಾರಣದಿಂದಲೇ ದೇವನಹಳ್ಳಿ, ದೊಡ್ಡಬಳ್ಳಾಪುರ ಹೀಗೆ ಐದಾರು ಊರುಗಳ ನೀರು ಕುಡಿಯುತ್ತಲೇ ವಿದ್ಯಾರ್ಜನೆ ಮಾಡಿದ್ದು. ಎಂಜಿನಿಯರಿಂಗ್ ಓದಲು ಬೆಂಗಳೂರಿಗೆ ಬಂದಾಗಿನಿಂದ ಮಹಾನಗರದಲ್ಲಿಯೇ ವಾಸ. ಇದು ಜೈಶಂಕರ್ ಹಿನ್ನೆಲೆ.

ಇತ್ತೀಚೆಗಷ್ಟೇ ನಡೆದ ಬೆಂಗಳೂರು ಅಂತರರಾಷ್ಟ್ರೀಯ ಕಿರುಚಿತ್ರ ಉತ್ಸವದ ನಂತರ ಇವರ ಮುಖದಲ್ಲಿ ಸಾರ್ಥಕತೆಯ ಮಂದಹಾಸ ಮಿನುಗುತ್ತಿದೆ. ಅದಕ್ಕೆ ಕಾರಣವೂ ಇದೆ. ಈ ಕಿರುಚಿತ್ರೋತ್ಸವದಲ್ಲಿ ಪ್ರಶಸ್ತಿ ಪಡೆದುಕೊಂಡಿರುವುದಷ್ಟೇ ಅಲ್ಲ, ಸಾಕಷ್ಟು ಪ್ರಶಂಸೆಗೂ ಒಳಗಾದ ಕಿರುಚಿತ್ರ 'ಲಚ್ಚವ್ವ'ಗೆ ಆ್ಯಕ್ಷನ್–ಕಟ್ ಹೇಳಿದ್ದು ಇದೇ ಜೈಶಂಕರ್. ಪೂರ್ಣಪ್ರಮಾಣದ ಸಿನಿಮಾ ನಿರ್ದೇಶನದ ಸಿದ್ಧತೆಯಲ್ಲಿರುವ ಅವರಿಗೆ ಈ ಪ್ರಶಸ್ತಿ ಆತ್ಮವಿಶ್ವಾಸದ ಜೊತೆಗೆ ಹೊಸ ಉತ್ಸಾಹವನ್ನೂ ಕೊಟ್ಟಿದೆ.

ಕಾಲೇಜು ದಿನಗಳಲ್ಲಿ ರಂಗಭೂಮಿಯತ್ತ ಒಲವು ಬೆಳೆಸಿಕೊಂಡ ಜೈಶಂಕರ್‌ಗೆ ಸಿನಿಮಾ ಮಾಧ್ಯಮದಲ್ಲಿ ಆಸಕ್ತಿ ಮೂಡಿದ್ದು ಪವನ್‌ಕುಮಾರ್ ಅವರ ಸಿನಿಮಾ ವರ್ಕ್‌ಶಾಪ್‌ನಲ್ಲಿ ಪಾಲ್ಗೊಂಡ ನಂತರ. 'ಪವನ್‌ಕುಮಾರ್ ಅವರ ವರ್ಕ್‌ಶಾಪ್‌ನಿಂದ ನಾನು ಚಿತ್ರತಯಾರಿಕೆಯ ಸಾಫ್ಟ್‌ವೇರ್, ಕ್ಯಾಮೆರಾ ಆ್ಯಂಗಲ್‌ಗಳ ಬಗ್ಗೆಯೆಲ್ಲ ಪ್ರಾಥಮಿಕ ತಿಳಿವಳಿಕೆ ಗಳಿಸಿಕೊಂಡಿದ್ದು. ನಂತರ ನಾನು ಮನೆಯಲ್ಲಿಯೇ ಸಿನಿಮಾಗಳ ಸಂಕಲನ, ಚಿತ್ರಕಥೆ, ನಿರ್ದೇಶನದ ಕುರಿತೆಲ್ಲ ಅಭ್ಯಾಸ ನಡೆಸುತ್ತ ಬಂದೆ' ಎಂದು ಏಕಲವ್ಯಮಾರ್ಗದ ಮೂಲಕ ಬೆಳೆದುಬಂದ ಪರಿಯನ್ನು ಅವರು ವಿವರಿಸುತ್ತಾರೆ.

ಜೈಶಂಕರ್ ಮೊದಲ ಕಿರುಚಿತ್ರ 'ಕಣ್ಮರೆ'. ತಾವು ಕಂಡ ಘಟನೆಗಳನ್ನೇ ಇಟ್ಟುಕೊಂಡು ಕಟ್ಟಿದ್ದ ಈ ಸಿನಿಮಾಕ್ಕೆ ನಟರನ್ನಾಗಿ ಬಳಸಿಕೊಂಡಿದ್ದೂ ತಮ್ಮ ಕುಟುಂಬ ಬಳಗದವರನ್ನೇ. 'ಮೊದಲ ಕಿರುಚಿತ್ರ ತುಂಬಾ ಇಮೆಚ್ಯೂರ್ ಆಗಿತ್ತು. ಆದರೆ ಅದರಲ್ಲಿಯೂ ಒಂದು ಕಥೆ ಇತ್ತು' ಎಂದು ನೆನಪಿಸಿಕೊಳ್ಳುತ್ತಾರೆ.

ಆಟೊಮೊಬೈಲ್ ಎಂಜಿನಿಯರಿಂಗ್ ಮುಗಿದ ಕೂಡಲೇ ಐಟಿ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡ ಜೈಶಂಕರ್ ಅವರ ವೀಕೆಂಡ್‌ಗಳು ಮಾತ್ರ ಸಿನಿಮಾ ಕಲಿಕೆಗೆ ಮೀಸಲಾಗಿರುತ್ತಿದ್ದವು.

'ಒಂದು ಸಲ ಫೇಸ್‌ಬುಕ್‌ನಲ್ಲಿ ಒಂದು ಪೋಸ್ಟ್ ನೋಡಿದೆ. ಪೈರಸಿ ಬಗ್ಗೆ ಒಂದು ಕಿರುಚಿತ್ರ ಮಾಡಿಕೊಂಡು ಬನ್ನಿ. ನಮಗೆ ಮೆಚ್ಚುಗೆಯಾದರೆ ನಿಮ್ಮ ಮುಂದಿನ ಚಿತ್ರವನ್ನು ನಾವು ನಿರ್ಮಾಣ ಮಾಡುತ್ತೇವೆ ಎಂದು ಆ ಪೋಸ್ಟರ್‌ನಲ್ಲಿತ್ತು. ನಾನು ಕಂಡು ಕೇಳಿದ ವಿಷಯಗಳನ್ನೇ ಇಟ್ಟುಕೊಂಡು 'ನರಸಿಂಹಯ್ಯನ ಫಿಲಂ' ಅಂತೊಂದು ಕಿರುಚಿತ್ರ ಮಾಡಿದೆ. ಚಿತ್ರೀಕರಣ, ಸಂಕಲನ, ಸಂಗೀತ ಹೀಗೆ ಎಲ್ಲ ವಿಭಾಗಗಳಲ್ಲಿಯೂ ಹೆಚ್ಚು ವೃತ್ತಿಪರವಾಗಿ ಮಾಡಿದ ಕಿರುಚಿತ್ರ' ಎಂದು ವಿವರಿಸುತ್ತಾರೆ ಜೈಶಂಕರ್.

ಹಳ್ಳಿಯೊಂದನ್ನು ಆಯ್ದುಕೊಂಡು ಅಲ್ಲಿ ಹೋಗಿ, ಜನರೊಂದಿಗೆ ಬೆರೆತು ಅಲ್ಲಿನ ಜನರನ್ನೇ ನಟರನ್ನಾಗಿಸಿಕೊಂಡು 'ನರಸಿಂಹಯ್ಯನ ಫಿಲಂ' ಪೂರ್ತಿಗೊಳಿಸಿದ್ದು ಜೈಶಂಕರ್ ಅವರಿಗೊಂದು ಅಪೂರ್ವ ಅನುಭವ. ಕಿರುಚಿತ್ರೋತ್ಸವವೊಂದರಲ್ಲಿ ಈ ಕಿರುಚಿತ್ರ ವೀಕ್ಷಿಸಿದ ರಿಷಭ್ ಶೆಟ್ಟಿ ತಮ್ಮ 'ಕಥಾಸಂಗಮ' ಪ್ರಯೋಗಕ್ಕೆ ಒಂದು ಕಿರುಚಿತ್ರ ಮಾಡಿಕೊಡುವಂತೆ ಕೇಳಿದರು.

'ಅವತ್ತು ರಾತ್ರಿ ಒಂದು ಗಂಟೆಗೆ ಕಾಲ್ ಮಾಡಿ ರಿಷಭ್ ಅವರು ನಾಳೆ ಒಂದು ಕಥೆ ರೆಡಿ ಮಾಡ್ಕೊಂಡು ಬಂದು ನನ್ನ ಭೇಟಿಯಾಗು ಎಂದು ಹೇಳಿದರು. ನಾನು ರಾತ್ರಿಯಿಡೀ ಕೂತು 'ಲಚ್ಚವ್ವ' ಕಥೆ ಸಿದ್ಧಮಾಡಿಕೊಂಡು ಹೋಗಿ ಹೇಳಿದೆ. ಅವರಿಗೆ ಇಷ್ಟವಾಗಿ ನಿರ್ಮಾಣ ಮಾಡಲು ಒಪ್ಪಿಕೊಂಡರು' ಎನ್ನುವ ಜೈಶಂಕರ್ ಮಾಡಿದ ಎಲ್ಲ ಕಿರುಚಿತ್ರಗಳೂ ರಿಯಲಿಸ್ಟಿಕ್ ಶೈಲಿಯಲ್ಲಿ ಇರುವಂಥವು. ಈಗ ಸಿದ್ಧತೆ ನಡೆಸಿರುವ ಸಿನಿಮಾದ ಕಥೆಯೂ ರಿಯಲಿಸ್ಟಿಕ್ ಮಾದರಿಯಲ್ಲಿಯೇ ಕಟ್ಟುತ್ತಿದ್ದಾರೆ. ಈ ಕಥೆ ಕೊಪ್ಪಳ ಭಾಗದಲ್ಲಿ ನಡೆಯುವುದರಿಂದ ಕೊಪ್ಪಳಕ್ಕೆ ಪದೇಪದೆ ಭೇಟಿಕೊಡುತ್ತಿದ್ದಾರೆ.

'ನಾನು ಹೆಚ್ಚು ಓದಿಕೊಂಡಿಲ್ಲ. ಹೆಚ್ಚು ವರ್ಲ್ಡ್ ಸಿನಿಮಾಗಳನ್ನೂ ನೋಡಿಲ್ಲ. ನಾನು ಕಂಡ, ಕೇಳಿದ, ಅನುಭವಿಸಿದ ವಿಷಯಗಳನ್ನೇ ಇಟ್ಟುಕೊಂಡು ಸಿನಿಮಾ ಕಟ್ಟುತ್ತೇನೆ. ಇದು ನನ್ನ ಶೈಲಿ. ಮುಂದೆಯೂ ಇದೇ ರೀತಿಯ ಸಿನಿಮಾಗಳನ್ನು ಮಾಡುತ್ತೇನೆ' ಎಂದು ದೃಢವಾಗಿಯೇ ಹೇಳುತ್ತಾರೆ ಅವರು.

'ಗಾಂಧಿನಗರದಲ್ಲಿ ಚಾಲ್ತಿಯಲ್ಲಿರಬೇಕು ಎಂದರೆ ಕೆಲವು ಸಲ ರಾಜಿ ಮಾಡಿಕೊಳ್ಳಬೇಕಾಗುತ್ತದಲ್ಲವೇ?' ಎಂದು ಹೇಳಿದರೆ 'ನನಗೆ ಗಾಂಧಿನಗರದಲ್ಲಿ ಚಾಲ್ತಿಯಲ್ಲಿರಬೇಕು ಎಂಬ ಹಟ ಇಲ್ಲ. ಸಿನಿಮಾ ಮಾಡಿಯೇ ಬದುಕಬೇಕಾದ ಅನಿವಾರ್ಯತೆಯೂ ಇಲ್ಲ. ಮೂರು ತಿಂಗಳ ರಜ ತೆಗೆದುಕೊಂಡು ಸಿನಿಮಾ ಮಾಡಿ ಮತ್ತೆ ಕೆಲಸಕ್ಕೆ ಹೋಗಬಹುದು. ಇಲ್ಲವೇ ಬದುಕಿನ ನಿರ್ವಹಣೆಗೆ ಬೇರೆ ಆಯ್ಕೆಗಳೂ ಇವೆ. ಹಾಗಾಗಿ ನಾನು ರಾಜಿ ಆಗಲಾರೆ. ನನ್ನ ಶೈಲಿಯ ಸಿನಿಮಾಗಳನ್ನೇ ಮಾಡುತ್ತೇನೆ. ಅದನ್ನು ಹೆಚ್ಚು ಜನರಿಗೆ ಹೇಗೆ ತಲುಪಿಸಬಹುದು ಎಂಬ ಕುರಿತು ಯೋಚಿಸುತ್ತೇನೆ' ಎಂದು ತುಂಬ ವಿಶ್ವಾಸದಿಂದ ನುಡಿಯುವ ಜೈಶಂಕರ್ ಧ್ವನಿಯಲ್ಲಿ ಕನ್ನಡ ಚಿತ್ರರಂಗದ ಹೊಸ ನೀರಿನ ಹುರುಪನ್ನೂ, ಸ್ವಾದವನ್ನೂ ಗುರ್ತಿಸಬಹುದು. ■